ಕರ್ನಾಟಕ ಉದ್ದಿಮೆಗಳ ಪರಿಹಾರ (ವಿಶೇಷ ಉಪಬಂಧಗಳ) ಕಾಯ್ದೆಗೆ ತಿದ್ದುಪಡಿ ಮಾಡುವ ಬಗ್ಗೆ

307 (644) ಶ್ರೀ ಎಂ ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಉದ್ದಿಮೆಗಳ ಪರಿಹಾರ (ವಿಶೇಷ ಉಪಬಂಧಗಳ) ಕಾಯಿದೆಯಲ್ಲಿ ಕಾರ್ಮಿಕರು ಶಿಸ್ತಿನ ಕ್ರಮಗಳಾದ ಬಿಡುಗಡೆ ಮಾಡುವುದು ಹಾಗೂ ಪದಚ್ಯುತಿಗೊಳಿಸುವುದನ್ನು ಸಹ ಪ್ರಶ್ನಿಸಿ ನ್ಯಾಯಾಲಯವನ್ನು ಮೊರೆಹೋಗಲು ಅವಕಾಶ ಇಲ್ಲದಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಉದ್ದಿಮೆಗಳ-ಕೈಗಾರಿಕೆಗಳ ಆಡಳಿತ ಮಂಡಳಿಯವರು ಈ ಕಾಯ್ದೆಯನ್ನು ಉಪಯೋಗಿಸಿ ಈ ಕಾಯ್ದೆಗೆ ಅಹ್ವತಿಯಾದ ಕಾರ್ಮಿಕರಿಗೆ ನ್ಯಾಯ ದೊರಕದಂತೆ ಮಾಡುತ್ತಿದ್ದಾರೆಯೇ ;

ಇ) ಸರ್ಕಾರವು ಈ ಕಾಯ್ದೆಯನ್ನು ಪರಿಶೀಲಿಸಿ ನಂತರ ಸೂಕ್ತ ತಿದ್ದುಪಡಿಗಳನ್ನು ತರುತ್ತದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).--ಸರ್ಕಾರವು ವಿಶೇಷ ಸಂದರ್ಭಗಳಲ್ಲಿ ಕಾರ್ಮಿಕ ವಿವಾದಗಳ ಕಾಯ್ದೆಯ ಉಪಬಂಧಗಳನ್ನು ರೋಗಗ್ರಸ್ಥ ಉದ್ದಿಮೆಗಳಿಗೆ ಅನ್ವಯವಾಗದಂತೆ ಆಜ್ಞೆ ಹೊರಡಿಸಿ ಸೂಚಿಸಬಹುದು.

ಆ) ಇಲ್ಲ.

ಇ) ಸರ್ಕಾರಕ್ಕೆ ಈ ಕಾಯ್ದೆಗೆ ತಿದ್ದುಪಡಿ ತರಲು ಕಾರಣ ಕಂಡುಬಂದಿಲ್ಲ. ಈ ಕಾನೂನನ್ನು ಛಾಲೆಂಜ್ ಮಾಡಿ ಹೈಕೋರ್ಟಿಗೆ ಒಂದು ರಿಟ್ ಅರ್ಜಿಯನ್ನು ಹಾಕಿದ್ದಾರೆ ಅದು ನಾಳೆ ನಾಡಿದ್ದರಲ್ಲಿ ಅಥವಾ ಮುಂದಿನ ವಾರದಲ್ಲಿ ಹಿಯರಿಂಗ್‌ಗೆ ಬರುತ್ತಿದೆ. ಆದ್ದರಿಂದ ದಯವಿಟ್ಟು ಇದನ್ನು ಕೇಳುವುದು ಬೇಡವೆಂದು ಮಾನ್ಯ ಸದಸ್ಯರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್ --ರಿಟ್ ಹಾಕಿರುವುದು ನನಗೆ ಗೊತ್ತಿದೆ. ನಾನು ಉತ್ತರ ಕೊಡುವುದಕ್ಕೂ ಇದಕ್ಕೂ ನೇರವಾದ ಸಂಬಂಧವಿಲ್ಲ ಆದರೆ ಇಲ್ಲಿ ಸರ್ಕಾರಕ್ಕೆ ಈ ಕಾಯ್ದೆಗೆ ತಿದ್ದುಪಡಿಯನ್ನು ತರಲು ಕಾರಣ ಕಂಡುಬಂದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ ಅಲ್ಲಿ ಅವರಿಗೆ ಪರಿಹಾರವನ್ನು ಕೊಡಬೇಕಾಗಿದೆ. ಆ ಕಾರ್ಮಿಕರಿಗೆ ವೇತನವನ್ನು ಕೊಡಬೇಕೆಂದು ಏನೂ ಕೇಳುತ್ತಿಲ್ಲ. ಈಗ ಎಂ. ಇ. ಐ. ಫ್ಯಾಕ್ಟರಿ ಇದೆ. ಅವರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಇದನ್ನು ಪರಿವರ್ತನೆ ಮಾಡಬೇಕೆಂದು ಅನೇಕ ಸಾರಿ ಕೇಳಿದ್ದಾರೆ. ಲೇಬರ್ ಇಲಾಖೆಯವರೂ ಕೂಡ ಈ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆಂದು ಕೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ --ಮಾನ್ಯ ಅಧ್ಯಕ್ಷರೇ, ಮುಚ್ಚಿ ಹೋಗತಕ್ಕಂಥ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ ಈ ಕಾನೂನು ಮಾಡಿದ್ದೇವೆ ಕಾನೂನು ಪ್ರಕಾರ ಇದರ ಬಗ್ಗೆ ಕ್ರಮ ಕೈಗೊಂಡು, ಸಾವುಕಾರರಿಗೆ ಹಣ ಕೊಡುವುದೇ ಆಗಲೀ ಅಥವಾ ಬೇರೆಯವರಿಗೆ ಹಣ ಕೊಡುವುದನ್ನು ನಿಲ್ಲಿಸುವುದಾಗಲೀ ಮಾಡಿದರೆ ಕಾರ್ಖಾನೆ ಮುಚ್ಚಿ ಹೋಗಿ ಕೆಲಸಗಾರರಿಗೆ ಕೆಲಸ ಹೋಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಇಂತಹ ಪರಿಸ್ಥಿತಿಯಲ್ಲಿ ಕಾನೂನು ಜಾರಿಗೆ ಕೊಡುತ್ತದೆ. ಸಂದರ್ಭಕ್ಕನುಗುಣವಾಗಿ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟನ್ನು ತಡೆಹಿಡಿಯಬೇಕು ಇಲ್ಲವೇ ಬೇರೆ ಬೇರೆ ಕಾನೂನುಗಳನ್ನು ಮಾಡಬೇಕು. ಕಾರ್ಮಿಕರ ಹಿತ ದೃಷ್ಟಿಯಿಂದ ಈ ಕೆಲಸ ಮಾಡಬೇಕಾಗುತ್ತದೆ. ನೌಕರರು ಡಿಸ್‌ಮಿಸ್ ಆಗಿರಬಹುದು. ನೌಕರರ ತಪ್ಪಿನಿಂದ ಅಥವಾ ಬಂಡವಾಳದ ತೊಂದರೆಯಿಂದ ಕಾರ್ಖಾನೆಗೆ ನಷ್ಟವಾಗಿರಬಹುದು ಈ ರೀತಿ ಎರಡೂ ತರಹ ಸಾಧ್ಯತೆ ಇದೆ. ಇಂಥ ಸಂದರ್ಭಗಳಲ್ಲಿ ತಾವು ಯಾವ ಪಾಪರೂ ನಿರ್ದಿಷ್ಟವಾದ ತೊಂದರೆ ಇದ್ದರೆ ಅಂಥದ್ದನ್ನು ಹೇಳಿದರೆ ವಿಚಾರ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್--ಹಿಂದಿನ ಮಾಲೀಕರು ಆ ನೌಕರರನ್ನು ಡಿಸ್‌ಮಿಸ್ ಮಾಡಿದರು. ಈ ಬಗ್ಗೆ ಹೈಕೋರ್ಟಿನಲ್ಲಿ ಕೇಸುಗಳು ನಡೆಯುತ್ತಿವೆ. ಹೈಕೋರ್ಟಿನವರು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ನಾಡುವ ಹಾಗೆ ಇಲ್ಲ. ಆದರೆ ಅಮೆಂಡ್‌ಮೆಂಟ್ ತಂದರೆ ಮಾಡಬಹುದೆಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಸಾಗರ್ ಅವರು ಇಲ್ಲೇ ಇದ್ದಾರೆ. ಅವರು ಲಾ ಡಿಪಾರ್ಟ್‌ಮೆಂಟಿನಲ್ಲಿ ವಿಚಾರ ಮಾಡಿ ಈ ಬಗ್ಗೆ ಒಂದು ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.--ಸ್ಪೆಸಿಫಿಕ್ ಕೇಸ್ ಇದ್ದರೆ ಅದನ್ನು ಮಾಡಲಿಕ್ಕೆ ಈಗಿನ ಕಾನೂನು ಪ್ರಕಾರ ಅವಕಾಶವಿದೆ. ಸ್ಪೆಸಿಫಿಕ್ ಕೇಸಿದ್ದರೆ ಕೊಡಿ ವಿಚಾರಣೆ ಮಾಡೋಣ.

ಪ್ರ. ಸಂ. 309 (727)

ಶ್ರೀ ಬಿ. ಗಂಗಣ್ಣ.--ಅಧ್ಯಕ್ಷರೇ, ಶಿರಾದಿಂದ ಇಲ್ಲಿಗೆ ಬಂದು ಹಾಲ್ಟ್ ಆಗುವ ಬಸ್ಸು 8-15 ಗಂಟೆಗೆ ಬರುತ್ತದೆ. ಶಿರಾದಿಂದ ಯಲನಾಡು ಕಡೆ ಹೋಗುವ ಪ್ರಯಾಣಿಕರಿಗೆ ಬಸ್ ಇಲ್ಲದೆ, ಹಾಗೂ ಬೆಂಗಳೂರಿನಿಂದ ನೇರವಾಗಿ ಊರಿಗೆ ಹೋಗಲು ಬಸ್ ಇಲ್ಲದೆ ಬಹಳ ತೊಂಭರೆಯಾಗಿದೆ. ಆದ್ದರಿಂದ ದಯವಿಟ್ಟು ಶಿರಾದಿಂದ ಒಂದು ಪ್ರತ್ಯೇಕವಾಗಿ ಬಸ್ ಹಾಕುವುದಕ್ಕೆ ಕ್ರಮಗೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.--ಈಗ ಪ್ರತ್ಯೇಕವಾಗಿ ಬಸ್ಸನ್ನು ಶಿರಾದಿಂದ ಯಲನಾಡಿನ ಕಡೆಗೆ ಓಡಿಸುವ ಬಗ್ಗೆ ಖಂಡಿತವಾಗಿ ಪರಿಶೀಲಿಸುತ್ತೇನೆ. ಆದರೆ ಅಲ್ಲಿ ರಾತ್ರಿ ತಂಗುವ ಬಸ್ಸುಗಳನ್ನು ಸದ್ಯಕ್ಕೆ ಬಿಡಲಿಕ್ಕೆ ಆಗುವುದಿಲ್ಲ.

ಪ್ರ. ಸಂ. 308 (888)

ಶ್ರೀ ಮಹದೇವ್.--ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೊಟ್ಟಿದ್ದೇನೆ. ಆದರೆ ಇದುವರೆಗೂ ನನಗೆ ಉತ್ತರ ಬಂದಿಲ್ಲ

ಶ್ರೀ ಎಸ್. ಆರ್. ಬೊಮ್ಮಾಯಿ --ಅಧ್ಯಕ್ಷರೆ, ಈ ಪ್ರಶ್ನೆ ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟ ವಿಷಯವಲ್ಲ. ಈ ಪ್ರಶ್ನೆ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆ. ಅವರ ಪ್ರಶ್ನೆ ಎಂದು ಇರುತ್ತದೆ ಅವ್ರೊತ್ತು ಹಾಕಿಕೊಳ್ಳಬೇಕು.

ಅಧ್ಯಕ್ಷರು.--ಸದ್ಯಕ್ಕೆ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಬೋರ್ಡಿನಿಂದ ಈ ವರ್ಷ ಉದ್ದಿಮೆದಾರರು ನೀಡಲಾದ ಸಾಲದ ವಿವರ.

312 (816) ಡಾ. ವಿ. ಎಸ್. ಆಚಾರ್ಯ (ಉಡುಪಿ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ 1983-84 ರಲ್ಲಿ ಈ ವರೆಗೆ ನೀಡಿರುವ ಸಾಲವೆಷ್ಟು ಹಾಗೂ ಇದರಲ್ಲಿ ಸಹಾಯಧನ ಎಷ್ಟು ;

ಆ) ಯಾವ ಯಾವ ವಿವಿಧ ಉದ್ಯೋಗಗಳಿಗೆ ಎಷ್ಟೆಷ್ಟು ಸಾಲ ಮತ್ತು ಸಹಾಯ ಧನ ನೀಡಲಾಗಿದೆ ?

ಇ) ಯಾವ ಯಾವ ಜಿಲ್ಲೆಗಳಿಗೆ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಷ್ಟೆಷ್ಟು ಸಾಲ ಬಿಡುಗಡೆ ಮಾಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).--

ಅ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು 1983-84 ನೇ ಸಾಲಿನಲ್ಲಿ 31-1-1984ರ ವರೆಗೆ 28, 91,000-00 ರೂಪಾಯಿ ಸಾಲ ಮತ್ತು 2, 54, 850-00 ರೂಪಾಯಿ ಅನುದಾನ ಬಿಡುಗಡೆ ಮಾಡಿದೆ.

ಆ) ಪಟ್ಟಿಯನ್ನು ಲಗತ್ತಿಸಿದೆ.

ಇ) ಪಟ್ಟಿಯನ್ನು ಲಗತ್ತಿಸಿದೆ.

Annexure to clause (B) of the L. A. question No. 816 by DR. V. S. Acharya

Statement showing the release of Loan and grant under various Khadi and village Industries during the year 1983-84 puto 31-1-1984

Sl. No.	Name of the Industry	Loan	Grant
1	2	3	4
1.	Processing of Cereals & Pulses	1,28,500-00	8,000-00
2	Non-Edible Oil & Soap	63,000-00	3,000-00